6

## ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಶ್ರೀ ಮಹಾಂತೇಶ ಎಂ. ಕುಂದನ ಅಧ್ಯಕ್ಷರು, ನಂದಗಾಂವ್ ಗ್ರಾಮ ಪಂಚಾಯಿತಿ, ಬೀದರ್ ಜಿಲ್ಲೆಯ, ಇವರು ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 43(ಎ) ಮತ್ತು 48(4) ಅನ್ವಯ ಸದಸ್ಯತ್ವವನ್ನು ತೆಗೆದುಹಾಕುವ ಕುರಿತು-ಆದೇಶ.

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 1135 ಗ್ರಾಪಂಅ 2018, ದಿನಾಂಕ:02.02.2019.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬೀದರ್, ಇವರ ಪತ್ರ ಸಂಖ್ಯೆ:ಜಿಪಂಬೀ/ಸಿಬ್ಬಂದಿ-2/ಸಿಆರ್-55/2016-17, ದಿನಾಂಕ:08-03-2018.
3. ಸರ್ಕಾರದ ಪತ್ರ ಸಂಖ್ಯೆ:ಗ್ರಾಅಪ 205 ಗ್ರಾಪಂಅ 2019, ದಿನಾಂಕ:09-05-2019.
4. ವಿಚಾರಣಾಧಿಕಾರಿಗಳು ಹಾಗೂ ಪ್ರಾದೇಶಿಕ ಆಯುಕ್ತರು, ಕಲಬುರಗಿ ವಿಭಾಗ, ಕಲಬುರಗಿ ಇವರ ಪತ್ರ ಸಂಖ್ಯೆ: ಕಂ/ಪ್ರಾಆಕ/ಜಿಪಂ/18/2019-20/1606, ದಿನಾಂಕ:15.07.2019.

**ಪ್ರಸ್ತಾವನೆ:**

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 43(ಎ) ರಡಿ ಗ್ರಾಮ ಪಂಚಾಯಿತಿ ಸದಸ್ಯರುಗಳು 48(4) ಮತ್ತು 48(5) ಗ್ರಾಮ ಪಂಚಾಯಿತಿ ಅಧ್ಯಕ್ಷ ಮತ್ತು ಉಪಾಧ್ಯಕ್ಷರುಗಳ ಮೇಲೆ ದಾಖಲಾಗುವ ದೂರುಗಳಿಗೆ ಸಂಬಂಧಿಸಿದಂತೆ ಅರೆನ್ಯಾಯಿಕ ಮಾದರಿಯಲ್ಲಿ ವಿಚಾರಣೆ ನಡೆಸುವ ಅಧಿಕಾರವನ್ನು ಸಂಬಂಧಿಸಿದ ಕಂದಾಯ ವಿಭಾಗಗಳ ಪ್ರಾದೇಶಿಕ ಆಯುಕ್ತರುಗಳಿಗೆ ಮೇಲೆ ಓದಲಾದ ಕ್ರಮಾಂಕ (1)ರ ದಿನಾಂಕ:02.02.2019 ರಲ್ಲಿ ವಹಿಸಿ, ಸರ್ಕಾರವು ಆದೇಶಿದೆ.

ಬೀದರ್ ಜಿಲ್ಲೆ, ಹುಮನಬಾದ್ ತಾಲ್ಲೂಕು, ನಂದಗಾಂವ್ ಗ್ರಾಮ ಪಂಚಾಯಿತಿಯ ಶ್ರೀ ಮಹಾಂತೇಶ ಎಂ. ಕುಂದನ ಅಧ್ಯಕ್ಷರು ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂ.ರಾಜ್ ಅಧಿನಿಯಮ 1993 ರ ಪ್ರಕರಣ 43(ಎ) ಮತ್ತು 48(4)ರನ್ವಯ ಗ್ರಾಮ ಪಂಚಾಯಿತಿ ಸದಸ್ಯರುಗಳ ಸದಸ್ಯತ್ವವನ್ನು ರದ್ದುಪಡಿಸುವಂತೆ ಕೋರಿ ಓದಲಾದ (2) ಪತ್ರದಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ಬೀದರ್, ಬೀದರ್ ಇವರು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದ್ದು. ಓದಲಾದ (3)ರ ಪತ್ರದ ಜೊತೆ ಈ ಪ್ರಕರಣದಲ್ಲಿ ವಿಚಾರಣೆ ಜರುಗಿಸಿ ವರದಿಯನ್ನು ಸಲ್ಲಿಸುವಂತೆ ವಿಚಾರಣಾಧಿಕಾರಿಗಳು ಹಾಗೂ ಪ್ರದೇಶಿಕ ಆಯುಕ್ತರು ಕಲಬುರಗಿ ವಿಭಾಗ, ಕಲಬುರಗಿ ಇವರಿಗೆ ತಿಳಿಸಿಲಾಗಿದೆ.

ಓದಲಾದ (4)ರ ಪತ್ರದ ಜೊತೆ ವಿಚಾರಣಾಧಿಕಾರಿಗಳು ಹಾಗೂ ಪ್ರಾದೇಶಿಕ ಆಯುಕ್ತರು, ಕಲಬುರಗಿ ವಿಭಾಗ, ಕಲಬುರಗಿ ಇವರು ವಿಚಾರಣ ವರದಿಯನ್ನು ಕಳುಹಿಸಿದ್ದು ಪರಿಶೀಲಿಸಲಾಗಿ ಅಧ್ಯಕ್ಷರಾದ ಶ್ರೀ ಮಹಾಂತೇಶ ಎಂ. ಕುಂದನ ಇವರು ಹಾಗೂ ಪಿ.ಡಿ.ಓ ಇವರುಗಳು ಭೂಮಾಲಿಕರ ಪೂರ್ವಾನುಮತಿ ಇಲ್ಲದೇ ಕಾಮಗಾರಿ ಮಂಜೂರು ಪಡೆಯದೆ ಖಾಸಗಿ ಜಮೀನಿನಲ್ಲಿ ಕೆಲಸ ಮಾಡಿರುವುದು ಕರ್ತವ್ಯ ಲೋಪವೆಸಗಿದಂತಾಗಿದೆ ಇದರಿಂದ ಬಡ ರೈತರ ಉಪಯುಕ್ತ ಜಮೀನಿನು ಪಾಳು ಬಿದ್ದಂತಾಗಿದ್ದು ಅವರಿಗೆ ಈ ಸಂಬಂಧ ಯಾವ ಹಣ ಕೂಡ ನೀಡಿಲ್ಲ ಜೆ.ಸಿ.ಬಿಯಿಂದ ರಾತ್ರೋರಾತ್ರಿ ಕಾಮಗಾರಿ ಮುಗಿಸಿ ನರೇಗಾ ಯೋಜನೆಯ ಮಾರ್ಗಸೂಚಿಗೆ ವಿರುದ್ಧ ನಿಯಮಬಾಯಿರವಾಗಿ ಕಾರ್ಯನಿರ್ವಹಿಸಿರುತ್ತಾರೆಂದು ತನಿಖಾಧಿಕಾರಿಗಳು ತನಿಖಾ ವರದಿಯಲ್ಲಿ ತಿಳಿಸಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 43(ಎ)(1)(V) ಮತ್ತು 48(4)ನ್ನು ಸ್ಪಷ್ಟವಾಗಿ ಉಲ್ಲಂಘಿಸಿರುವುದಾಗಿ ವಿಚಾರಣಾಧಿಕಾರಿಗಳು ವಿಚಾರಣ ವರದಿಯಲ್ಲಿ ತಿಳಿಸಿತ್ತಾರೆ, ಸದರಿ ಅಧಿನಿಯಮದ ಮೇರೆಗೆ ಇವರುಗಳನ್ನು ಗ್ರಾಮ ಪಂಚಾಯಿತಿಯ ಅಧ್ಯಕ್ಷ ಹಾಗೂ ಸದಸ್ಯತ್ವ ಸ್ಥಾನದಿಂದ ತೆಗೆದುಹಾಕರಲು ಶಿಫಾರಸ್ಸು ಮಾಡಿರುತ್ತಾರೆ ಈ ಹಿನ್ನೆಲೆಯಲ್ಲಿ ಮೇಲೆ ತಿಳಿಸಿರುವ ಅಧ್ಯಕ್ಷ/ಸದಸ್ಯತ್ವ ಸ್ಥಾನದಿಂದ ತಕ್ಷಣದಿಂದ ಜಾರಿಬರುವಂತೆ ಸರ್ಕಾರವು ನಿರ್ಣಯಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/663/ಗ್ರಾಪಂಅ/2019**
**ಬೆಂಗಳೂರು, ದಿನಾಂಕ:-28-01-2020.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಬೀದರ್ ಜಿಲ್ಲೆ, ಹುಮನಬಾದ್ ತಾಲ್ಲೂಕು, ನಂದಗಾಂವ್ ಗ್ರಾಮ ಪಂಚಾಯಿತಿಯ ಅಧ್ಯಕ್ಷರಾದ ಶ್ರೀ ಮಹಾಂತೇಶ ಎಂ. ಕುಂದನ ಇವರ ಮೇಲಿನ ಆರೋಪಗಳು ವಿಚಾರಣೆಯಲ್ಲಿ ಸಾಬಿತಾಗಿರುವುದಾಗಿ ತನಿಖಾವರದಿಯಲ್ಲಿ ಶಿಫಾರಸ್ಸು ಮಾಡಿರುವುದರಿಂದ ಇವರು

ಕರ್ತವ್ಯ ನಿರ್ವಹಣೆಯಲ್ಲಿ ಲೋಪವೆಸಗಿದ್ದಾರೆಂದು ಮತ್ತು ಹಣ ದುರ್ಬಳಕೆ ಇತ್ಯಾದಿ ಆರೋಪಗಳನ್ನು ಮಾಡಿರುವುದರಿಂದ ಇವರನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 48(4)ಮತ್ತು 48(5)ರನ್ವಯ ನಂದಗಾವ್ ಗ್ರಾಮ ಪಂಚಾಯಿತಿಯ ಅಧ್ಯಕ್ಷ ಮತ್ತು ಸದಸ್ಯ ಸ್ಥಾನದಿಂದ ತಕ್ಷಣದಿಂದ ಜಾರಿಗೆ ಬರುವಂತೆ ತೆಗೆದುಹಾಕಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

B. Naveenkumar 28/01/2020
(ನವೀನ್ ಕುಮಾರ್. ಬಿ)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ(ಗ್ರಾ.ಪಂ),
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

28/1/20

<u>ಗೆ,</u>

1. ವಿಚಾರಣಾಧಿಕಾರಿಗಳು ಹಾಗೂ ಪ್ರಾದೇಶಿಕ ಆಯುಕ್ತರು ಕಲಬುರಗಿ ವಿಭಾಗ, ಕಲಬುರಗಿ.
2. ಜಿಲ್ಲಾಧಿಕಾರಿ, ಬೀದರ್ ಜಿಲ್ಲೆ, ಬೀದರ್,
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಬೀದರ್.
4. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಹುಮನಬಾದ್, ಬೀದರ್ ಜಿಲ್ಲೆ.
5. ಪಂಚಾಯತ್ ಅಭಿವೃದ್ಧಿ ಅಧಿಕಾರಿ, ನಂದಗಾಂವ್ ಗ್ರಾಮ ಪಂಚಾಯಿತಿ, ಬೀದರ್ ಜಿಲ್ಲೆ, **(ಮತ್ತು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಅಧ್ಯಕ್ಷರಿಗೆ ಈ ಆದೇಶವನ್ನು ಜಾರಿಮಾಡಿ ಸ್ವೀಕೃತಿ ಪಡೆದು ಸರ್ಕಾರಕ್ಕೆ ಸಲ್ಲಿಸಲು ಸೂಚಿಸಿದೆ).**
6. ಶಾಖಾ ರಕ್ಷಾ ಕಡತ/ಗಣಕಕೋಶ/ಹೆಚ್ಚುವರಿ/ಪ್ರತಿ.

<u>ಪ್ರತಿಯನ್ನು ಮಾಹಿತಿಗಾಗಿ:</u>

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌದ ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ.